Zigly Pet Care

# ಸಾಕುಪ್ರಾಣಿಗಳ ಉತ್ಸವ 'ಪೆಟ್ ಫೆಡ್'ನಲ್ಲಿ ಝಿಗ್ಲಿ ಸಂಭ್ರಮಾಚರಣೆ: ಸಾಕುಪ್ರಾಣಿಗಳ ಆರೈಕೆಯ ಸಮಗ್ರ ಉತ್ಪನ್ನಗಳ ಪ್ರದರ್ಶನ

**ಬೆಂಗಳೂರು, 18 ಜನವರಿ 2026:** ಭಾರತದ ಮೊದಲ ತಂತ್ರಜ್ಞಾನ-ಆಧಾರಿತ ಸಾಕುಪ್ರಾಣಿಗಳ ಆರೈಕೆಯ ಬಹು ಬಗೆಯ ಮಾರಾಟ ಬ್ರ್ಯಾಂಡ್ ಆಗಿರುವ ಝಿಗ್ಲಿ (ಕಾಸ್ಮೊ ಫಸ್ಟ್ ಲಿಮಿಟೆಡ್- Zigly), ಬೆಂಗಳೂರಿನ ವೈಟ್‌ಫೀಲ್ಡ್‌ನ ಕೆಟಿಪಿಒ ಟ್ರೇಡ್ ಸೆಂಟರ್‌ನಲ್ಲಿ ನಡೆದ ಸಾಕುಪ್ರಾಣಿಗಳ ಉತ್ಸವ 'ಪೆಟ್ ಫೆಡ್'ನ 11 ನೇ ಆವೃತ್ತಿಯಲ್ಲಿ ಸಾಕುಪ್ರಾಣಿಗಳ ವೈದ್ಯಕೀಯ ಆರೈಕೆ, ಅಂದಗೊಳಿಸುವ ಸೇವೆಗಳು ಮತ್ತು ಸಾಕುಪ್ರಾಣಿ ಪೋಷಣೆಯ ಸಮಗ್ರ ಉತ್ಪನ್ನಗಳನ್ನು ಪ್ರದರ್ಶಿಸಿತು.

ಶನಿವಾರ ಹಾಗೂ ಭಾನುವಾರ (ಜ. 17 ಹಾಗೂ 18) ನಡೆದ ಈ ಎರಡು ದಿನಗಳ ಉತ್ಸವದಲ್ಲಿ ಝಿಗ್ಲಿ- ಸಾಕುಪ್ರಾಣಿಗಳ ಮಾಲೀಕರು ಮತ್ತು ಅವರ ಸಾಕುಪ್ರಾಣಿಗಳಿಗಾಗಿ ತನ್ನ ಉತ್ಪನ್ನಗಳು ಮತ್ತು ಸೇವೆಗಳ ಸಂಪೂರ್ಣ ಶ್ರೇಣಿಯನ್ನು ತನ್ಮಯಗೊಳಿಸುವ ಅನುಭವ ಸ್ವರೂಪದಲ್ಲಿ ಪ್ರದರ್ಶಿಸಿತು.

ಈ ವರ್ಷದ 'ಪೆಟ್ ಫೆಡ್'ನಲ್ಲಿನ ಝಿಗ್ಲಿ-ಯ ಭಾಗವಹಿಸುವಿಕೆಯು ಒಂದೇ ಸೂರಿನಡಿ ಸಂಪೂರ್ಣ ಬಗೆಯ ಸಾಕುಪ್ರಾಣಿ ಆರೈಕೆ ಪರಿಹಾರವನ್ನು ನೀಡುವ ಮೂಲಕ ಹೊಣೆಗಾರಿಕೆಯ ಸಾಕುಪ್ರಾಣಿ ಪಾಲನೆಗೆ ಬ್ರ್ಯಾಂಡ್‌ನ ಬದ್ಧತೆಯನ್ನು ಬಲಪಡಿಸಿತು. ತಜ್ಞ ಪಶುವೈದ್ಯರ ಜೊತೆಗಿನ ಆರೋಗ್ಯ ಸಮಾಲೋಚನೆಗಳಿಂದ ಹಿಡಿದು ಮೋಜಿನ ಮತ್ತು ಆಕರ್ಷಕ ಚಟುವಟಿಕೆಗಳು, ಹೊಸ ಉತ್ಪನ್ನಗಳ ಪ್ರದರ್ಶನಗಳು, ಪ್ರಾಣಿಗಳನ್ನು ಅಂದಗೊಳಿಸುವ ಅಗತ್ಯ ವಸ್ತುಗಳು ಮತ್ತು ಕ್ಷೇಮ ಆಯ್ಕೆಗಳವರೆಗಿನ ಸಮಗ್ರ ಸ್ವರೂಪದ ಪ್ರದರ್ಶನವು ಸಾಕು ಪ್ರಾಣಿಗಳ ಮಾಲೀಕರ ಗಮನ ಸೆಳೆಯಿತು. ಈ ಸಾಕುಪ್ರಾಣಿ- ಕೇಂದ್ರಿತ ಉತ್ಸವವು ಸಾಕುಪ್ರಾಣಿಗಳನ್ನು ಒಳಗೊಂಡಿರುವ ಕುಟುಂಬಗಳು ಮತ್ತು ಸಾಕುಪ್ರಾಣಿ ಕಲ್ಯಾಣ ಸಮುದಾಯಗಳ ಜೊತೆಗೆ ಅರ್ಥಪೂರ್ಣ ಒಡನಾಟಕ್ಕೆ ಅವಕಾಶ ಒದಗಿಸಿಕೊಟ್ಟಿತು. ಅನಾರೋಗ್ಯ ತಡೆಗಟ್ಟುವ ಮತ್ತು ಕಾಲ, ಕಾಲಕ್ಕೆ ತೆಗೆದುಕೊಳ್ಳಬೇಕಾದ ಸಾಕು ಪ್ರಾಣಿಗಳ ಆರೈಕೆಯ ಬಗ್ಗೆ ಜಾಗೃತಿ ಮೂಡಿಸಿತು.

ಈ ವರ್ಷದ 'ಪೆಟ್ ಫೆಡ್'ನಲ್ಲಿ ಝಿಗ್ಲಿ ಭಾಗವಹಿಸುವಿಕೆಯ ಕುರಿತು ಮಾತನಾಡಿದ **ಝಿಗ್ಲಿ-ಯ ಸಿಇಒ ಸೌರಭ್ ಜೈನ್** ಅವರು, "ಕಳೆದ ವರ್ಷದ ಯಶಸ್ಸಿನ ಆಧಾರದ ಮೇಲೆ, ಈ ಬಾರಿಯ ಪೆಟ್ ಫೆಡ್ ಬೆಂಗಳೂರು ಸಾಕುಪ್ರಾಣಿಗಳು ಮತ್ತು ಅವುಗಳ ಪೋಷಕರು ಗಮನಾರ್ಹ ಸಂಖ್ಯೆಯಲ್ಲಿ ಭಾಗವಹಿಸುವಿಕೆಗೆ ಸಾಕ್ಷಿಯಾಯಿತು. ಇಂತಹ ಕಾರ್ಯಕ್ರಮಗಳು ಝಿಗ್ಲಿ ಸಮುದಾಯದ ಜೊತೆಗೆ ಒಡನಾಟ ಹೊಂದಲು, ಬದಲಾಗುತ್ತಿರುವ ಪ್ರವೃತ್ತಿಗಳು ಮತ್ತು ಬೇಡಿಕೆಗಳನ್ನು ವಿಶ್ಲೇಷಿಸಲು ಮತ್ತು ಗ್ರಾಹಕರ ಅಗತ್ಯಗಳಿಗೆ ಅನುಗುಣವಾಗಿ ಉತ್ಪನ್ನಗಳು ಮತ್ತು ಸೇವೆಗಳನ್ನು ನೀಡಲು ನಮಗೆ ಒಂದು ಪ್ರಮುಖ ವೇದಿಕೆಯಾಗಿ ನೆರವಾಗುತ್ತವೆ. ಭಾರತದ ಅತಿದೊಡ್ಡ ಸಾಕುಪ್ರಾಣಿ ಉತ್ಸವದ ಭಾಗವಾಗಿರುವುದಕ್ಕೆ ನಾವು ಸಂತೋಷಪಡುತ್ತೇವೆ. ಜವಾಬ್ದಾರಿಯುತ ಸಾಕುಪ್ರಾಣಿಗಳ ಆರೈಕೆ, ಸಮಗ್ರ ಯೋಗಕ್ಷೇಮ ಉತ್ತೇಜನ ಮತ್ತು ತಜ್ಞರ ಮಾರ್ಗದರ್ಶನವು ಇಲ್ಲಿ ಸುಲಭವಾಗಿ ದೊರೆಯಲಿದೆ' ಎಂದು ಹೇಳಿದ್ದಾರೆ.

ಬೆಂಗಳೂರಿನ ಈ 'ಪೆಟ್ ಫೆಡ್' ಆವೃತ್ತಿಯಲ್ಲಿ ಝಿಗ್ಲಿ ತನ್ನ ವಿಸ್ತಾರವಾದ ಉತ್ಪನ್ನ ಶ್ರೇಣಿಯನ್ನು ಅಪ್ಲಾಡ್ ಟ್ರೀಟ್‌ಗಳು ಮತ್ತು ವೆಟ್ ಫುಡ್, ಬಿಸ್ಕತ್ತುಗಳು, ತಾಜಾ ಆಹಾರ, ಸೂಪ್ , ಬಟ್ಟಲುಗಳು, ಕೊರಳಪಟ್ಟಿ, ಕಾಲರ್‌ಗಳು ಮತ್ತು ಹಾರ್ನೆಸ್‌ಗಳು, ರೋಮಗಳನ್ನು

ಅಂದಗೊಳಿಸುವ ಶ್ರೇಣಿ (ಶಾಂಪೂ, ಕಂಡಿಷನರ್, ಸುಗಂಧ ದ್ರವ್ಯಗಳು, ಪೀ ಪ್ಯಾಡ್‌ಗಳು) ಮತ್ತು ಬೆಕ್ಕುಗಳ ಅಗತ್ಯ ಪರಿಕರಗಳಾದ (ಲಿಟರ್ ಮತ್ತು ಟ್ರೀಟ್‌ಗಳು) ನಂತಹ ವಿಭಾಗಗಳಲ್ಲಿ ಪ್ರದರ್ಶಿಸಿತು. ಹೆಚ್ಚುವರಿಯಾಗಿ, ಝಿಗ್ಲಿ, ಈ ಕಾರ್ಯಕ್ರಮದಲ್ಲಿ, ವಾಣಿಜ್ಯ ಬಿಡುಗಡೆಯ ಮೊದಲು ಸಾಕುಪ್ರಾಣಿಗಳ ಅಪ್ಲಾಡ್ ಡ್ರೈ ಫುಡ್ ಶ್ರೇಣಿಯನ್ನು ಅನಾವರಣಗೊಳಿಸಿತು. ಈ ಅಪ್ಲಾಡ್ ಡ್ರೈ ಫುಡ್ ಭಾರತದ ಹವಾಮಾನ ಮತ್ತು ಜೀವನಶೈಲಿಯ ಅಗತ್ಯಗಳಿಗಾಗಿ ವಿನ್ಯಾಸಗೊಳಿಸಲಾದ ಉತ್ತಮ ಗುಣಮಟ್ಟದ, ಸಂಶೋಧನೆ-ಆಧಾರಿತ ಒಣ ಆಹಾರವಾಗಿದೆ. ಪಶುವೈದ್ಯರು ಮತ್ತು ಪೌಷ್ಟಿಕಾಂಶ ತಜ್ಞರ ನೆರವಿನಿಂದ ಅಭಿವೃದ್ಧಿಪಡಿಸಲಾಗಿರುವ ಹೊಸ ಆಹಾರ ಸೂತ್ರವು ಸಾಕುಪ್ರಾಣಿಗಳ ಕರುಳಿನ ಆರೋಗ್ಯ, ರೋಗನಿರೋಧಕ ಶಕ್ತಿ ಮತ್ತು ಸಾಕು ಪ್ರಾಣಿಗಳ ರೋಮಗಳ ಆರೋಗ್ಯ ಮತ್ತು ಹೊಳಪಿನ ಗುಣಮಟ್ಟ ಕಾಯ್ದುಕೊಳ್ಳಲು ನೆರವಾಗಲಿದೆ. ಇದು ಮರಿ ಮತ್ತು ವಯಸ್ಕ ಬಗೆಗಳಲ್ಲಿ 150 ಗ್ರಾಂ, 2 ಕೆಜಿ ಮತ್ತು 4 ಕೆಜಿ ಪ್ಯಾಕ್‌ಗಳಲ್ಲಿ ಲಭ್ಯ ಇರಲಿದೆ. ಈ ಶ್ರೇಣಿಯು ಭಾರತದ ಅತ್ಯಂತ ವಿಶ್ವಾಸಾರ್ಹ ಪೌಷ್ಟಿಕಾಂಶ ಭರಿತ ಸಾಕುಪ್ರಾಣಿ ಆರೈಕೆ ಬ್ರ್ಯಾಂಡ್ ಆಗುವತ್ತ 'ಝಿಗ್ಲಿ'-ಯ ಪಯಣವನ್ನು ಬಲಪಡಿಸಲಿದೆ.

ಸಾಕುಪ್ರಾಣಿಗಳಿಗೆ ನೆರವಾಗುವ ಉದ್ದೇಶಕ್ಕೆ ಝಿಗ್ಲಿ-ಯು ಈ ಉತ್ಸವದಲ್ಲಿ ಉಚಿತ ಆರೋಗ್ಯ ತಪಾಸಣೆ ಸೌಲಭ್ಯ ಒದಗಿಸಿತ್ತು. ಲಸಿಕೆ ಪ್ಯಾಕೇಜ್‌ಗಳಲ್ಲಿ ಶೇಕಡ 25ರಷ್ಟು, ಆಯ್ದ ಶಸ್ತ್ರಚಿಕಿತ್ಸೆಗಳಲ್ಲಿ ಶೇಕಡ 20ರಷ್ಟು ರಿಯಾಯ್ತಿ ನೀಡಿತ್ತು. ₹ 249 ಕ್ಕೆ ತನ್ನ ಪ್ರೈಮ್ ಕ್ಲಬ್ ಸದಸ್ಯತ್ವವನ್ನು ನೀಡಿತು. ಇದರ ಜೊತೆಗೆ, ಝಿಗ್ಲಿ ₹ 999 ಮೌಲ್ಯದ ಸಾಕುಪ್ರಾಣಿ ಶಾಪಿಂಗ್‌ಗಾಗಿ ಸ್ನಾನ ಮತ್ತು ಬ್ಲೋ ಡ್ರೈಯಂತಹ ಉಚಿತ ಆರೈಕೆಯನ್ನು ಮತ್ತು ಲಕ್ಕಿ ಡ್ರಾದಲ್ಲಿ ಭಾಗವಹಿಸುವ ಅವಕಾಶವನ್ನು ನೀಡಿತು.

ಈ ಉತ್ಸವ- ಸಾಕುಪ್ರಾಣಿ ಸಮುದಾಯದ ನಿಜವಾದ ಸಂಭ್ರಮಾಚರಣೆಯಾಗಿದ್ದು, ಸಾಕುಪ್ರಾಣಿ ಪೋಷಕರು, ಉದ್ಯಮ ತಜ್ಞರು ಮತ್ತು ಪ್ರಾಣಿ ಪ್ರಿಯರನ್ನು ನಿರಂತರ ಮೋಜು ಮತ್ತು ಕಲಿಕೆಗಾಗಿ ಒಟ್ಟುಗೂಡಿಸಿತು. ಈ ವರ್ಷದ ಉತ್ಸವ ಮುಕ್ತಾಯಗೊಳ್ಳುತ್ತಿದ್ದಂತೆ, 'ಝಿಗ್ಲಿ'ಯ ವಿಸ್ತೃತ ಕೊಡುಗೆಗಳು ಮತ್ತು ಆಕರ್ಷಕ ಉಪಕ್ರಮಗಳು ಭವಿಷ್ಯದಲ್ಲಿ ಇನ್ನಷ್ಟು ಸುಧಾರಣೆಯಾದ, ಸಮುದಾಯದ ಅಗತ್ಯಗಳನ್ನು ಮುಂಚಿತವಾಗಿ ಗಮನಿಸಲು ವೇದಿಕೆ ಸಿದ್ಧಪಡಿಸಿದೆ.